ದಿಃ17.01.2023 O S No.250/2015 PW-1

ದಿಃ17.01.2023 ರಂದು ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎ ಬಿ ಕೆ ವಕೀಲರಿಂದ

ಕೆಂಪಮ್ಮನವರು ಬದುಕಿದ್ದ ಕಾಲದಲ್ಲಿ ಅವರು ಯಾರ ಹೆಸರಿಗೆ ಯಾವ ಸ್ವತ್ತನ್ನು ಮಾಡಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ 1 ನೇ ಐಟಂ ನಲ್ಲಿ 15 1/2 ಗುಂಟೆ, 2 ನೇ ಐಟಂ ನಲ್ಲಿ 2 ಎಕರೆ 1 ಗುಂಟೆ ಪೈಕಿ ಒಂದು ಎಕರೆ ಹಾಗೂ ಐಟಂ ನಂಬರ್ 4 ರಲ್ಲಿ 15 1/2 ಗುಂಟೆ ಪೈಕಿ 8 ಗುಂಟೆ ಮೃತ ಕೆಂಪಮ್ಮನವರು ಅವರ ಮಗಳಾದ ನಿಂಗಮ್ಮನವರಿಗೆ ನೊಂದಣಿ ದಾನ ಪತ್ರದ ಮೂಲಕ ದಾನವಾಗಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಂಗಮ್ಮನವರು ಮೇಲೆ ಹೇಳಿದ ಸ್ವತ್ತುಗಳನ್ನು ಅನುಭವಿಸಿಕೊಂಡು ಬಂದಿದ್ದು ಅವರ ಮರಣಾನಂತರ ಅವರ ಮಕ್ಕಳವಾದ ಬಸವಲಿಂಗೇಗೌಡ, ಕೆಂಪರಾಜು ಮತ್ತು ನಾಗಮ್ಮ ಅನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಕೆಂಪಮ್ಮನವರು ದಾನ ಪತ್ರ ಮಾಡಿರುವ ವಿಚಾರ ಗೊತ್ತಿದ್ದರು ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಇನ್ನು ನಾಲ್ಕು ಜನ ಮಕ್ಕಳು ಇರುವ ವಿಚಾರ ಗೊತ್ತಿದ್ದರು ಸಹ ಪ್ರಸ್ತುತ ದಾವೆಯ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸುಳ್ಳು ಮದುವೆ ಅಗಿರುವ ವಿಚಾರ ನಮಗೆ ಗೊತ್ತಿಲ್ಲ. ನಮ್ಮತಾಯಿ ಮದುವೆ ಆದ 1 ತಿಂಗಳ ನಂತರ ಮಾಕಳಿ ಹೊಸಹಳ್ಳಿ ಗ್ರಾಮಕ್ಕೆ ಹೋಗಿ ಸೇರಿಕೊಂಡ ನಂತರ 1 ನೇ ಪ್ರತಿವಾದಿ ಬೋರಮ್ಮ ಅಲಿಯಾಸ್ ಲಕ್ಷಮ್ಮನವರನ್ನು 2 ನೇ ವಿವಾಹಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ನಾನು ಹುಟ್ಟೆ ಇರಲಿಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯಲ್ಲಿ 1 ನೇ ಪ್ರತಿವಾದಿಯ ಸಹೋದರಿಯರು ಮತ್ತು 1 ನೇ ಪ್ರತಿವಾದಿಗೆ ಅವರ 2 ನೇ ಹೆಂಡತಿಯ ಮಕ್ಕಳನ್ನು ಗೊತ್ತಿದ್ದರು ಸಹ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ನಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಂಗಮ್ಮನವರಿಗೆ ದಾನಪತ್ರ ಮಾಡಿರುವ ಸ್ವತ್ತುಗಳನ್ನು ಹೊರತು ಪಡಿಸಿ ಉಳಿದ ದಾವಾ ಷೆಡ್ಯೂಲ್ ಸ್ವತ್ತುಗಳಿಗೆ ಮೊಳ್ಳೇ ಲಿಂಗೇಗೌಡರ ಮಕ್ಕಳು ಮತ್ತು ಮೊಮ್ಮಕ್ಕಳು ಎಲ್ಲರಿಗೂ

ಸೇರತಕ್ಕದ್ದು ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ತಕರಾರಿನಲ್ಲಿ ತಿಳಿಸಿರುವಂತೆ ಅವಶ್ಯಕ ಪಕ್ಷಗಾರರನ್ನು, ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಅವರು ಯಾರು ಬಂದಿಲ್ಲ ಎಂದು ನುಡಿಯುತ್ತಾರೆ. ಉದ್ದೇಶಪೂರ್ವಕವಾಗಿ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಂಗಮ್ಮನವರ ಹೆಸರಿಗೆ ದಾನ ಪತ್ರ ಆಗಿರುವ ವಿಚಾರ ಗೊತ್ತಿದ್ದರು ಸಹ ಉದ್ದೇಶಪೂರಕವಾಗಿ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿಗೆ ನಾನು ಹಕ್ಕಿಗೆ ಅರ್ಹಳಲ್ಲ ಎಂದರೆ ನನಗೆ ಹಕ್ಕಿದೆ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಏನು ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.